**ನಟಿ ರಮ್ಯಾ ಅವರು, ಸೈಬರ್ ಕ್ರೈಮ್‌ಗೆ ಅನಾಮಿಕ ಐಡಿಗಳ ಪಟ್ಟಿ ಸಹಿತ, ಟ್ರೋಲಿಗರ ವಿರುದ್ಧ ದೂರು ಸಲ್ಲಿಸಿದ್ದಾರೆ. ಈ ಹಿಂದೆ ಟ್ರೋಲಿಗೆ ಒಳಗಾದ, ಅವುಗಳನ್ನು ನಿಭಾಯಿಸಿದ ನಟಿಯರಾದ ನೀತು ಮತ್ತು ಮೇಘನಾ ರಾಜ್ ಇಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.**

■ ನಿರೂಪಣೆ: ಎಸ್ಸೆನ್

# ಹತಾಶೆ ಹೊರಹಾಕಲು ಹೆಣ್ಣುಮಕ್ಕಳೇ ಗುರಿಯಾಗುವುದೇಕೆ?



ಸಾಮಾಜಿಕ ಜಾಲತಾಣಗಳಲ್ಲಿ ಅವಮಾನಿಸುವ, ಅಶ್ಲೀಲ ಪದ ಬಳಸಿ ನಿಂದಿಸುವ ಕಮೆಂಟ್‌ಗಳು, ಟ್ರೋಲ್‌ಗಳ ಅನುಭವ ಹಲವು ಬಾರಿ ನನಗೆ ಆಗಿದೆ.

‘ಸ್ಲಗ್ ಶೇಮಿಂಗ್’ ಎನ್ನುವುದು ಈಗ ಸಾಮಾನ್ಯ ಎನ್ನುವಂತೆ ಆಗಿದೆ. ನನಗೆ ಆರೋಗ್ಯ ಸಮಸ್ಯೆಯಿಂದ ಏಕಾಏಕಿ ದಪ್ಪ ಆದಾಗ ಇಂಥದ್ದೇ ಕೆಟ್ಟ ಕಮೆಂಟ್‌ಗಳು ಕಾಣಿಸಿಕೊಳ್ಳುತ್ತಿದ್ದವು. ದಪ್ಪ ಆಗಿದ್ದಾಳೆ, ಯಾಕೆ ದಪ್ಪ ಆದಳೋ, ಏನು ಮಾಡ್ತಾಳೋ ಏನೋ... ಹೀಗೆ ಅಸಂಬದ್ಧ, ಅನವಶ್ಯಕ, ಅಶ್ಲೀಲ ಕಮೆಂಟ್‌ಗಳು ಬರುತ್ತಿದ್ದವು.

ನಟಿಯರು ಎಲ್ಲಿಗಾದರೂ ಹೋದರೆ, ಆ ಫೋಟೊ ಹಂಚಿಕೊಂಡರೆ ಸಾಕು ಅದಕ್ಕೂ ಒಂದು ಕಮೆಂಟ್ ಬಂದಿರುತ್ತದೆ. ಈ ರೀತಿ ಕಮೆಂಟ್ ಮಾಡುವ ಮನಸ್ಥಿತಿಯನ್ನು ಏನೆನ್ನಬೇಕೋ ಗೊತ್ತಿಲ್ಲ.

ಪುರುಷರು ತಮ್ಮ ಹತಾಶೆಯನ್ನು ಹೊರಹಾಕಲು ಹೆಣ್ಣುಮಕ್ಕಳು ಸುಲಭ ದಾರಿಯಂತೆ ತೋರುತ್ತಿದ್ದಾರೆ. ಹೆಣ್ಣುಮಕ್ಕಳ ಚಾರಿತ್ರ್ಯವಧೆ ಮಾಡುವುದು ಸುಲಭ ಸಾಧ್ಯವಾಗಿದೆ. ಹೆಣ್ಣಿನ ಗುಣ ನಡತೆಗಳ ಬಗ್ಗೆ ಸಲೀಸಾಗಿ ಮಾತಾಡಲು ಸಾಮಾಜಿಕ ಜಾಲತಾಣಗಳನ್ನು ವೇದಿಕೆ ಮಾಡಿಕೊಂಡಿದ್ದಾರೆ. ಯಾರೋ ಒಂದು ಹೆಣ್ಣುಮಗಳು ತನಗೆ ಖುಷಿ ಎಂದು ಡಾನ್ಸ್ ಮಾಡಿ ವಿಡಿಯೊ ಹಾಕಿದರೆ ಸಾಕು, ಆಕೆಯನ್ನು ಹೀನಾಯವಾಗಿ ತೆಗಳುವ, ನಿಂದಿಸುವ ಕಮೆಂಟ್‌ಗಳು ಎಷ್ಟೋ ಸಿಗುತ್ತವೆ.

ಸೈಬರ್ ಕ್ರೈಂ ನಮ್ಮಲ್ಲಿ ಇನ್ನೂ ಅಷ್ಟು ಗಟ್ಟಿಯಿಲ್ಲ. ಅನಾಮಿಕ ಖಾತೆಗಳಿಂದ ಈ ರೀತಿ ಮಾಡುವುದು ಸಹಜವಾಗಿದೆ. ಮೊದಮೊದಲು ಈ ರೀತಿ ಕಮೆಂಟ್‌ಗಳನ್ನು ನೋಡಿದಾಗ ನನಗೆ ತುಂಬಾ ದುಃಖ ಆಗುತ್ತಿತ್ತು. ನನ್ನ ವೃತ್ತಿಜೀವನದ ಆರಂಭದ ದಿನಗಳಲ್ಲಿ ಸೋಷಿಯಲ್ ಮೀಡಿಯಾ ಹೊರತೂ ಈ ರೀತಿಯ ಕಮೆಂಟ್‌ಗಳನ್ನು ಕೇಳಿದ್ದೇನೆ. ಇವುಗಳಿಂದ ಹಿಂಜರಿಕೆ, ನಮ್ಮ ಬಗ್ಗೆಯೇ ನಮಗೆ ಕೀಳರಿಮೆ ಹುಟ್ಟಿಕೊಳ್ಳುತ್ತದೆ. ನಮ್ಮ ಆತ್ಮವಿಶ್ವಾಸ ಕುಗ್ಗುತ್ತದೆ. ಇದು ನಮ್ಮ ಕೆಲಸದ ಮೇಲೂ ಪರಿಣಾಮ ಬೀರುತ್ತದೆ.

ಇಂಥ ಕಮೆಂಟ್‌ಗಳನ್ನು ನಿರ್ಲಕ್ಷ್ಯ ಮಾಡಬೇಕು ಎಂದು ಕೆಲವರು ಹೇಳುತ್ತಾರೆ. ಆದರೆ ಸೂಕ್ಷ್ಮ ಮನಸ್ಸಿನವರಿಗೆ ನಿರ್ಲಕ್ಷ್ಯ ಮಾಡುವುದು ಆಗುವುದಿಲ್ಲ ಹಾಗೂ ಯಾವಾಗಲೂ ನಿರ್ಲಕ್ಷ್ಯ ಮಾಡಲು ಸಾಧ್ಯವಿಲ್ಲ.

ನಟಿ ರಶ್ಮಿಕಾ ಅವರ ಉದಾಹರಣೆಯನ್ನೇ ನೋಡಿದರೆ, ಅವರನ್ನು ಎಷ್ಟು ಟ್ರೋಲ್ ಮಾಡುತ್ತಾರೆ. ಅನವಶ್ಯಕವಾಗಿ ಅವರನ್ನು ಯಾವುದೋ ವಿಷಯಗಳಿಗೆ ಎಳೆದು ತರುತ್ತಾರೆ. ಕನ್ನಡದವರೇ ಈ ರೀತಿ ಮಾಡುತ್ತಿರುವುದು ಬೇಸರದ ಸಂಗತಿ. ಒಬ್ಬರನ್ನು ನಿಂದಿಸುವುದೇ ಸರಿಯಲ್ಲ. ಅಂಥದ್ದರಲ್ಲಿ ಅವರ ಚಾರಿತ್ರ್ಯವಧೆ ಮಾಡುವುದು ಎಷ್ಟು ಸರಿ? ಇದನ್ನೆಲ್ಲಾ ನೋಡಿದರೆ, ಜನರು ತುಂಬಾ ಅಸೂಕ್ಷ್ಮವಾಗಿದ್ದಾರೆ ಎನಿಸುತ್ತೆ. ಬೇರೆಯವರ ಬಗ್ಗೆ ಏನು ಬೇಕಾದರೂ ಮಾತಾಡಬಹುದು ಎಂಬ ಸ್ವಾತಂತ್ರ್ಯವನ್ನು ತಾವೇ ಸಾಮಾಜಿಕ ಜಾಲತಾಣಗಳ ಮೂಲಕ ಪಡೆದುಕೊಂಡಿದ್ದಾರೆ.

ಹೀರೊಗಳಿಗೆ ಈ ರೀತಿ ಮಾಡಿದ ಸಂದರ್ಭ ತುಂಬಾ ವಿರಳ. ಅವರ ಬಗ್ಗೆ ಕೆಟ್ಟದಾಗಿ ಬರೆಯುವುದು ಅಪರೂಪ. ಅವರ ಪೌರುಷದ ಬಗ್ಗೆ ಎಷ್ಟು ಬೇಕಾದರೂ ಬರೆಯುತ್ತಾರೆ, ಅವರನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ. ಆದರೆ ನಟಿಯರ ವಿಷಯದಲ್ಲಿ ಇದು ತದ್ವಿರುದ್ಧ. ಪುರುಷರಷ್ಟೇ ಅಲ್ಲ, ಕೆಲವು ಹೆಣ್ಣುಮಕ್ಕಳು ಕೂಡ ಈ ರೀತಿ ತಮ್ಮ ಹತಾಶೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹೊರಹಾಕುತ್ತಾರೆ. ಪುರುಷರಂತೆ ಅಶ್ಲೀಲ ಪದ ಬಳಸದೇ ಇದ್ದರೂ ತಮ್ಮ ಸಿಟ್ಟನ್ನು ಕೆಟ್ಟದಾಗಿ ಹೊರಹಾಕುವ ಉದಾಹರಣೆಗಳೂ ಸಿಗುತ್ತವೆ.

ಒಂದು ಪಾಸಿಟಿವ್ ವಿಷಯ ಎಂದರೆ, ಈಗ ಹೆಣ್ಣುಮಕ್ಕಳು ಇಂಥ ಸಂಗತಿಗಳಿಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಅವರಿಗೇನು ಬೇಕೋ ಅದನ್ನು ಮಾಡುತ್ತಿರುತ್ತಾರೆ. ಜೊತೆಗೆ, ಒಳ್ಳೆಯ ಬೆಳವಣಿಗೆ ಎಂದರೆ, ಶಿಕ್ಷಿತ ಜನರು ಈ ರೀತಿ ಕೆಟ್ಟ ಕಮೆಂಟ್ ಮಾಡುವವರಿಗೆ ರಿಪ್ಲೈ ಮಾಡುತ್ತಾರೆ. ಯಾರೋ ಇದನ್ನು ವಿರೋಧಿಸುತ್ತಿದ್ದಾರೆ ಎನ್ನುವುದೂ ಸಮಾಧಾನ.

ತುಂಬಾ ಸ್ಟ್ರಾಂಗ್ ಆಗಿರುವ ಕಡೆಗಳಲ್ಲಿ ದೂರು ನೀಡಬಹುದು. ಆದರೆ ಅನಾಮಿಕರನ್ನು ನಿಯಂತ್ರಣಕ್ಕೆ ತರುವುದು ಹೇಗೆ ಸಾಧ್ಯವೋ ತಿಳಿಯದು. ಸದ್ಯ ಹೆಣ್ಣುಮಕ್ಕಳು ಅವರ ಆತ್ಮವಿಶ್ವಾಸವನ್ನು ಕುಗ್ಗಿಸಿಕೊಳ್ಳಬಾರದು ಎಂದು ಮಾತ್ರ ಹೇಳಬಲ್ಲೆ. ಇದಕ್ಕೆ ಒಂದು ಮೂಲ ಪರಿಹಾರ ಎಂದರೆ, ಸಮಾಜದಲ್ಲಿಯೇ ಬದಲಾವಣೆ ಆಗಬೇಕಿದೆ. ನಮ್ಮ ನಡುವಿನ ವಿಕೃತ ಮನಸ್ಥಿತಿಯಲ್ಲೇ ಬದಲಾವಣೆ ಆಗಬೇಕಿದೆ.

—ನೀತು ಶೆಟ್ಟಿ, ನಟಿ

